## ನಿಮ್ಮೊಡನೆ

# ಸುಳ್ಳುಗಳ ಸಂತೆಯಲೊಂದು ಮನೆಯ ಮಾಡಿ...

ಸಮಾಜದ ಆರೋಗ್ಯದ ದೃಷ್ಟಿಯಿಂದ ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕಬೇಕಾದುದು ಸರ್ಕಾರಗಳ ಕರ್ತವ್ಯ; ಅದು ಸಮಾಜದ ಹೊಣೆಗಾರಿಕೆಯೂ ಹೌದು. ಸುಳ್ಳುಗಳಿಗೆ ನೀರು ಮತ್ತು ಗೊಬ್ಬರ ಹಾಕುವುದು ಮುಂದಿನ ತಲೆಮಾರುಗಳಿಗೆ ನಂಜುಣಿಸುವಷ್ಟೇ ಆತ್ಮಘಾತುಕ ಕೃತ್ಯ.

‘ಸತ್ಯಮೇವ ಜಯತೆ’ ಎನ್ನುವುದು ನಮ್ಮ ದೇಶದ ಧ್ಯೇಯ ವಾಕ್ಯ; ರಾಷ್ಟ್ರೀಯ ಲಾಂಛನದ ತಳಭಾಗದಲ್ಲಿ ದೇವನಾಗರಿ ಲಿಪಿಯಲ್ಲಿ ಈ ವಾಕ್ಯವನ್ನು ಕೆತ್ತಲಾಗಿದೆ. ಭಾರತೀಯ ಪುರಾಣಗಳು ಹೇಳುವ ನಾಲ್ಕು ಯುಗಗಳಲ್ಲಿ ಮೊದಲನೆಯದು ‘ಸತ್ಯ’ಯುಗ. ಮೌಲ್ಯದ ರೂಪದಲ್ಲಿ ‘ಸತ್ಯ’ ನಮ್ಮ ಬದುಕಿನ ಭಾಗವಾಗಿದೆ; ಸ್ಮೃತಿಗಳ ರೂಪದಲ್ಲಿ ನಮ್ಮನ್ನು ಆವರಿಸಿಕೊಂಡಿದೆ. ಈ ‘ಸತ್ಯ’ ಪ್ರಸ್ತುತ ನಮ್ಮ ಬದುಕಿನಿಂದ ದೂರವಾಗುತ್ತಿದೆಯೆ? ನಮ್ಮ ಬದುಕನ್ನು ಆವರಿಸಿಕೊಂಡಿರುವ ಸುಳ್ಳು ಸುದ್ದಿಗಳನ್ನು ಗಮನಿಸಿದರೆ, ಸತ್ಯದ ಬದಲು ಸುಳ್ಳಿನ ವಾರಸುದಾರರಾಗಿ ನಾವು ಬದಲಾಗಿದ್ದೇವೆ ಎನ್ನುವ ಅನುಮಾನ ಉಂಟಾಗುತ್ತದೆ.

ಸುಳ್ಳು ಸುದ್ದಿಗಳಿಂದ ಆಗಬಹುದಾದ ಅಪಾಯ, ಅಂತರ್ಜಾಲದಲ್ಲಿ ಇರುವ ತಪ್ಪು ಮಾಹಿತಿಯನ್ನು ಗುರ್ತಿಸುವ ಸಾಮರ್ಥ್ಯ ಹಾಗೂ ಮಾಧ್ಯಮ ಸ್ವಾತಂತ್ರ್ಯದ ಅಳತೆಗೋಲುಗಳ ಮೂಲಕ ದೇಶವೊಂದರ ಸುಳ್ಳು ಸುದ್ದಿ ಉತ್ಪಾದಕತೆಯ ಸಾಮರ್ಥ್ಯವನ್ನು ಅಂದಾಜು ಮಾಡಲಾಗುತ್ತದೆ. ಇಂಥ ಲೆಕ್ಕಾಚಾರಗಳ ಪ್ರಕಾರ, ಸುಳ್ಳು ಸುದ್ದಿ ಉತ್ಪಾದನೆಯಲ್ಲಿ ಭಾರತ ವಿಶ್ವದಲ್ಲೇ ಮುಂಚೂಣಿ ರಾಷ್ಟ್ರಗಳಲ್ಲೊಂದಾಗಿದೆ. ‘ವರ್ಲ್ಡ್ ಎಕನಾಮಿಕ್ ಫೋರಂ’ನ 2024ರ ವರದಿ, ಸುಳ್ಳು ಸುದ್ದಿಗಳ ಸೃಷ್ಟಿಯಲ್ಲಿ ಭಾರತ ವಿಶ್ವದ ಉಳಿದೆಲ್ಲ ದೇಶಗಳಿಗೆ ಸೆಡ್ಡು ಹೊಡೆದಿರುವುದಾಗಿ ಗುರ್ತಿಸಿದೆ.

ಫಿನ್ಲೆಂಡ್, ಇಂಗ್ಲೆಂಡ್, ನಾರ್ವೆಗಳಂಥ ಕೆಲವು ದೇಶಗಳು ಆನ್‌ಲೈನ್‌ನಲ್ಲಿ ಸೇರಿಕೊಂಡಿರುವ ತಪ್ಪು ಮಾಹಿತಿಗಳನ್ನು ಪತ್ತೆ ಹಚ್ಚಿ ಸರಿಪಡಿಸುವಲ್ಲಿ ಗಣನೀಯ ಪ್ರಗತಿ ಸಾಧಿಸಿವೆ. ದುರದೃಷ್ಟವಶಾತ್, ನಮ್ಮಲ್ಲಿ ಫೇಕ್ ನ್ಯೂಸ್ ಕಸವನ್ನು ಹೆಚ್ಚಿಸುತ್ತಲೇ ಇದ್ದೇವೆ. ಸುಳ್ಳು ಸುದ್ದಿಯನ್ನು ಪತ್ತೆ ಹಚ್ಚುವಲ್ಲಿ ಹಾಗೂ ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕಾದ ಮಾಧ್ಯಮಗಳು ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸುವ ಬದಲು, ತಾವೇ ಕೊಳಕು ಮೆತ್ತಿಕೊಂಡಿವೆ. ಪಹಲ್ಗಾಮ್‌ನಲ್ಲಿ ನಡೆದ ನಾಗರಿಕರ ಹತ್ಯಾಕಾಂಡದ ಕಾರಣದಿಂದಾಗಿ ಭಾರತ ಹಾಗೂ ಪಾಕಿಸ್ತಾನ ನಡುವೆ ಇತ್ತೀಚೆಗೆ ನಡೆದ ಸಂಘರ್ಷದ ಸಮಯದಲ್ಲಿ ಮಾಧ್ಯಮಗಳ ವೃತ್ತಿಪರತೆ ಮತ್ತು ಬದ್ಧತೆಯ ದಿವಾಳಿತನ ಜಗಜ್ಜಾಹೀರಾಗಿದೆ.

ಸುಳ್ಳು ಸುದ್ದಿಗಳಿಗೆ ಸಂಬಂಧಿಸಿದಂತೆ ಭಾರತ ಕುಖ್ಯಾತಿ ಪಡೆಯುವಲ್ಲಿ ರಾಜಕಾರಣಿಗಳ ಕೊಡುಗೆ ದೊಡ್ಡದು. ಜನಸೇವೆಯ ಉತ್ತರದಾಯಿತ್ವವನ್ನೇ ಮರೆತಿರುವ ರಾಜಕಾರಣಿಗಳು, ಸುಳ್ಳು ಹೇಳುವುದನ್ನೇ ಉದ್ಯೋಗವಾಗಿ ಮಾಡಿಕೊಂಡಿರುವಂತಿದೆ ಹಾಗೂ ತಮ್ಮ ಸಂಪರ್ಕಕ್ಕೆ ಬಂದ ಎಲ್ಲದಕ್ಕೂ ಎಲ್ಲರಿಗೂ ಗಲೀಜನ್ನು ಹಚ್ಚುತ್ತಿದ್ದಾರೆ. ಇದರ ಪರಿಣಾಮವಾಗಿಯೇ ಜನಸಮೂಹದ ದೊಡ್ಡ ವರ್ಗವೊಂದು ಸುಳ್ಳು ಸುದ್ದಿ ಉತ್ಪಾದನೆ ಮತ್ತು ಹಂಚುವಿಕೆಯಲ್ಲಿ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ತೊಡಗಿಕೊಂಡಿದೆ. ನಮ್ಮ ನಿಲುವಿಗೆ ಹೊಂದದ ಎಲ್ಲವನ್ನೂ ವಿರೂಪಗೊಳಿಸುವ ಮೂಲಕ ಸತ್ಯಕ್ಕೆ ಅಪಚಾರ ಎಸಗುತ್ತಿದ್ದೇವೆ. ಪ್ರತಿ ದಿನವೂ ಒಂದಲ್ಲಾ ಒಂದು ಬಗೆಯಲ್ಲಿ ನಾವೆಲ್ಲ ಸುಳ್ಳುಗಳ ಉತ್ಪಾದನೆಯಲ್ಲಿ ತೊಡಗಿರುವಂತಿದೆ. ಯುಗಚಕ್ರದ ಆದಿಯನ್ನು ‘ಸತ್ಯ’ದ ಮೂಲಕ ಗುರ್ತಿಸುವ ಪರಂಪರೆಗೆ ಸೇರಿದ ನಾವು ನಮ್ಮ ಕಾಲವನ್ನು ‘ಸುಳ್ಳುಗಳ ಯುಗ’ವನ್ನಾಗಿ ರೂಪಿಸಿಕೊಂಡಿದ್ದೇವೆ.

ಸುಳ್ಳು ಸುದ್ದಿಗಳ ನಿಯಂತ್ರಣದಲ್ಲಿ ಕಾನೂನು ಅನುಷ್ಠಾನ ಪರಿಣಾಮಕಾರಿ ಆಗಿಲ್ಲದಿರುವುದು ಸುಳ್ಳುಬುರುಕರಿಗೆ ಒತ್ತಾಸೆಯಾಗಿದೆ. ಕರ್ನಾಟಕದ ಉದಾಹರಣೆಯನ್ನೇ ನೋಡಿ: 2023ರಿಂದ ಇಲ್ಲಿಯವರೆಗೆ, ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸಿದವರ ವಿರುದ್ಧ 259 ಪ್ರಕರಣಗಳು ರಾಜ್ಯದ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ. ಅವುಗಳಲ್ಲಿ ಆರು ಪ್ರಕರಣಗಳಲ್ಲಷ್ಟೇ ಶಿಕ್ಷೆಯಾಗಿದೆ. ಎಪ್ಪತ್ತೈದು ಪ್ರಕರಣಗಳು ವಿಚಾರಣಾ ಹಂತದಲ್ಲಿವೆ. ಸುಳ್ಳು ಸುದ್ದಿ ಹಬ್ಬಿಸುವುದಕ್ಕೆ ಹಾಗೂ ದ್ವೇಷದ ಮಾತುಗಳನ್ನಾಡಲು ಪರವಾನಗಿ ಪಡೆದಂತೆ ಕೆಲವರ ನಡವಳಿಕೆಯಿದೆ ಹಾಗೂ ಆ ಧೋರಣೆಯನ್ನು ಸರ್ಕಾರ ಮತ್ತು ಸಮಾಜ ಸಹಿಸಿಕೊಳ್ಳುತ್ತಿದೆ.

‘ಧಾರ್ಮಿಕ ಮತ್ತು ಸಾಮಾಜಿಕ ಘರ್ಷಣೆಗಳು ಹೆಚ್ಚಾಗಲಿಕ್ಕೆ ಸುಳ್ಳು ಸುದ್ದಿಗಳೇ ಕಾರಣ. ಪ್ರಜಾಪ್ರಭುತ್ವ, ಸಂವಿಧಾನ ಹಾಗೂ ಸಾಮಾಜಿಕ ಮೌಲ್ಯವ್ಯವಸ್ಥೆಗೆ ಸುಳ್ಳು ಸುದ್ದಿಗಳು ಕಂಟಕ’ ಎಂದು ಅಭಿಪ್ರಾಯಪಟ್ಟಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪೊಲೀಸ್ ಠಾಣೆಗಳಲ್ಲಿ ಫ್ಯಾಕ್ಟ್ ಚೆಕ್ ಘಟಕಗಳನ್ನು ಸ್ಥಾಪಿಸುವಂತೆ ಕಳೆದ ವರ್ಷ ಆದೇಶಿಸಿದ್ದರು. ಧರ್ಮ, ಮತ, ಭಾಷೆ, ಪ್ರಾಂತ, ವರ್ಣ, ಇತ್ಯಾದಿ ಅಂಶಗಳನ್ನು ಬಳಸಿಕೊಂಡು ದ್ವೇಷಪೂರಿತ ಪೋಸ್ಟ್‌ಗಳನ್ನು ಹಾಕುವವರ ವಿರುದ್ಧವೂ ದೂರು ದಾಖಲಿಸಿಕೊಂಡು ಕಾನೂನು ಕ್ರಮ ಜರುಗಿಸಲಾಗುತ್ತದೆ ಎಂದು ಪೊಲೀಸ್ ಇಲಾಖೆಯೂ ಹೇಳಿತ್ತು. ಆದರೆ, ಕಾನೂನು ಕ್ರಮದ ಮಾತುಗಳು ಕಾರ್ಯರೂಪಕ್ಕೆ ಬರುತ್ತಿಲ್ಲ ಎನ್ನುವುದಕ್ಕೆ ನಿತ್ಯ ಸೃಷ್ಟಿಯಾಗುತ್ತಿರುವ ಸುಳ್ಳು ಸುದ್ದಿಗಳೇ ಉದಾಹರಣೆಯಂತಿವೆ.

ಸಮಾಜದ ಆರೋಗ್ಯದ ದೃಷ್ಟಿಯಿಂದ ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕಬೇಕಾದುದು ಸರ್ಕಾರಗಳ ಕರ್ತವ್ಯವಾಗಿರುವಂತೆ ಸಮಾಜದ ಹೊಣೆಗಾರಿಕೆಯೂ ಹೌದು. ಸುಳ್ಳುಗಳಿಗೆ ನೀರು ಮತ್ತು ಗೊಬ್ಬರ ಹಾಕುವುದು ಮುಂದಿನ ತಲೆಮಾರುಗಳಿಗೆ ನಂಜುಣಿಸುವಷ್ಟೇ ಆತ್ಮಘಾತುಕ ಕೃತ್ಯ ಎನ್ನುವುದನ್ನು ಇನ್ನಾದರೂ ನಾವು ಅರಿಯಬೇಕು.

■ ರಘುನಾಥ ಚ.ಹ.

